## ನಕ್ಕುಬಿಡಿ



ನಾಣಿ: ಆ ಹೊಸ ಹೀರೋಯಿನ್ ಕೈಯಲ್ಲಿ ಪೆನ್ನು, ಪ್ಯಾಡು ಹಿಡಿದುಕೊಂಡು ಬರುತ್ತಿದ್ದಾಳಲ್ಲ ಯಾಕೆ?

ಗುಂಡ: ಇವತ್ತು ಮೇಕಪ್ ಟೆಸ್ಟು ಇದೇ ಅಂತ ನಿರ್ದೇಶಕರು ಅವಳಿಗೆ ಹೇಳಿದಾರಂತೆ. ಅದಕ್ಕೆ.

★★★

ಗುಂಡ: ಡಾಕ್ಟ್ರೇ ನಾನು ತುಂಬಾ ಪ್ರೀತಿಸುತ್ತಿದ್ದ ಹುಡುಗಿ ಕೈ ಕೊಟ್ಟಿದ್ದಕ್ಕೆ ನಾನು ಕುಡಿತದ ದಾಸನಾಗಿದ್ದೆ. ನೀವು ಚಿಕಿತ್ಸೆ ನೀಡಿ ಕುಡಿತದ ಚಟ ಬಿಡಿಸಿದ್ರಿ. ಆದರೆ ಈಗ ನನಗೆ ಮತ್ತೆ ಕುಡಿಯೋ ಚಟ ಬಂದಿದೆ.

ವೈದ್ಯ: ಅರೆ ಹೌದಾ? ಯಾಕೆ?'

ಗುಂಡ: 'ನಿಮ್ಮ ನರ್ಸ್ ಮರೀಬೇಕಲ್ಲ. ಅದಕ್ಕೆ.

★★★

ರಾಧಾ: ಇಂಥಾ ಕುಡುಕನನ್ನು ನಾನು ಎಲ್ಲೂ ನೋಡಿಲ್ಲ.

ಸುಮಾ: ಯಾಕೆ ಏನಾಯಿತು?

ರಾಧಾ: ಡಾಕ್ಟ್ರು ಕೊಟ್ಟ ಔಷಧಿಗೂ ಅವನು ಸೋಡಾ ಬೆರೆಸಿಕೊಂಡು ಕುಡೀತಾನೇ!

★★★

ಗೆಳೆಯ: ನಾನು ನಿಮ್ಮ ಮನೆಗೆ ಬಂದು ಊಟ ಮಾಡುವಾಗಲೆಲ್ಲಾ ನಿಮ್ಮ ನಾಯಿ ನನ್ನನ್ನೇ ದುರುಗುಟ್ಟಿಕೊಂಡು ನೋಡುತ್ತದೆ ಯಾಕೆ?

ಗುಂಡ: ಅದು ತನ್ನ ತಟ್ಟೇನ ಚೆನ್ನಾಗಿ ಗುರುತಿಸುತ್ತದೆ.

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

---

## ಸಮುದ್ರ ಮಥನ




### ಉತ್ತಮ ಮಾಹಿತಿ

'ಕಾಡುವ ಕೆಮಿಕಲ್ಸ್', ಸುಧಾ ಹೆಗಡೆ ಅವರು ಬರೆದ ಮುಖಪುಟ ಲೇಖನ (ಸುಧಾ, ಏ. 9) ಉತ್ತಮ ಮಾಹಿತಿ ನೀಡಿದೆ. ಗರ್ಭಿಣಿಯರು ಹಾಗೂ ಚಿಕ್ಕ ಮಕ್ಕಳ ಪೋಷಕರು ಆಹಾರದ ಬಗ್ಗೆ ತೆಗೆದುಕೊಳ್ಳಬೇಕಾದ ಎಚ್ಚರಿಕೆ ಕುರಿತು ಲೇಖನ ವಿವರ ನೀಡಿದೆ.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಮನೆಯ ತಿಂಡಿ ಆರೋಗ್ಯಕರ

ಮಕ್ಕಳ ಬೆಳವಣಿಗೆ ಬಗ್ಗೆ ಪೋಷಕರು ವಹಿಸಬೇಕಾಗಿರುವ ಎಚ್ಚರಿಕೆ ಕುರಿತು ಲೇಖನ ಸಮಗ್ರವಾಗಿ ತಿಳಿಸಿದೆ. ಫಾಸ್ಟ್‌ಫುಡ್‌ಗಿಂತಲೂ ಮನೆಯ ತಿಂಡಿ ಆರೋಗ್ಯಕರ ಎಂಬುದನ್ನು ನಮ್ಮ ಮಹಿಳೆಯರು, ವಿಶೇಷವಾಗಿ ನಗರದವರು ತಿಳಿಯಬೇಕು.

-ಟಿ.ಎಸ್. ಸರಸ್ವತಿ, ತುರುವೇಕೆರೆ

### ಮುಖಪುಟ ಆಕರ್ಷಕ

ಪುಟ್ಟ ಮಗುವನ್ನು ಹೊತ್ತ ಮುಖಪುಟ ಅತ್ಯಂತ ಆಕರ್ಷಕವಾಗಿದೆ.

-ಕೆ.ಎಂ. ಮಧ್ವರಾಯ, ಬೆಂಗಳೂರು

### ಮಹತ್ವಪೂರ್ಣ

ವಿಚಾರಲಹರಿ ಮೂಚಿ ಅವರ 'ಕೋಪವೆಂಬ ದಾವಾನಲ' ಮಹತ್ವದ್ದಾಗಿದೆ. ಸರ್ಕಾರಗಳು ಹೊಸ ಜಾತಿಗಳನ್ನು ಹುಟ್ಟುಹಾಕಿ ಜಾತಿ ವ್ಯವಸ್ಥೆಯನ್ನು ಪೋಷಿಸುತ್ತಿರುವದರಿಂದ ಜಾತ್ಯತೀತ ಭಾರತ ಕನಸಾಗಿಯೇ ಉಳಿಯಲಿದೆ.

-ಮಹಾದೇವಿ ಟೀಚರ, ಶಿವಮೊಗ್ಗ

### ಸಮಯೋಚಿತ

'ನಿಮ್ಮೊಡನೆ'ಯಲ್ಲಿ ಕ್ರೀಡೆ ಮತ್ತು ಆರೋಗ್ಯ'ದ ಬಗ್ಗೆ ಬಿ.ಎಂ. ಹನೀಫ್ ಅವರು ಬರೆದ ಲೇಖನ ಸಮಯೋಚಿತವಾಗಿದೆ. ಕ್ರೀಡೆ ಎನ್ನುವುದು ಬರೀ ಜೂಜಲ್ಲ, ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಕ್ರೀಡೆ ಪೂರಕ ಎನ್ನುವ ಮಾತು ಸತ್ಯ.

-ಮುಕುಂದ ಹೆರಕಲ್ಲ, ಕಲಬುರಗಿ, ಎಂ.ಜಿ. ರಾಮಚಂದ್ರ, ಮಂಡಗಳಲೆ

### ಸರ್ಕಾರ ಚಿಂತನೆ ನಡೆಸಬೇಕು

ವಿಶ್ವಮಟ್ಟದ ಕ್ರೀಡೆಯಲ್ಲಿ ಭಾರತ ಬೆಳಗಬೇಕಾದರೆ ಗ್ರಾಮೀಣ ಕ್ರೀಡಾಪಟುಗಳನ್ನು ಗುರುತಿಸಿ ಪ್ರಧಾನ ವೇದಿಕೆಗೆ ಕರೆತಂದು ತರಬೇತಿ ನೀಡಿ ರಾಷ್ಟ್ರಮಟ್ಟದ ಸ್ಪರ್ಧೆಗೆ ಕಳುಹಿಸಬೇಕು. ಇದಕ್ಕಾಗಿ ಕೇಂದ್ರ, ರಾಜ್ಯ ಸರ್ಕಾರಗಳು ಚಿಂತನೆ ನಡೆಸಿ ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ 'ನಿಮ್ಮೊಡನೆ' ಬರಹ ಉತ್ತಮ ಕೆಲಸ ಮಾಡಿದೆ.

-ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

### ಸಮಗ್ರ ಮಾಹಿತಿ

ಆರೋಗ್ಯ ಲೇಖನ 'ಅರ್ಬುದಕ್ಕೇಕೆ ಬಡವರ ಮೇಲೆ ಕಣ್ಣು?', ಕಿದ್ವಾಯಿ ಆಸ್ಪತ್ರೆ ನಿರ್ದೇಶಕ ಡಾ.ಕೆ.ಬಿ. ಲಿಂಗೇಗೌಡ ಅವರ ಸಂದರ್ಶನ (ಉಮಾ ಅನಂತ್) ಕ್ಯಾನ್ಸರ್ ಬಗ್ಗೆ ಸಮಗ್ರ ಮಾಹಿತಿ ನೀಡಿದೆ. ಪ್ರತಿ ಜಿಲ್ಲೆಗೊಂದು ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣವಾಗಬೇಕು, ಸರ್ಕಾರಿ ಆಸ್ಪತ್ರೆಗಳಲ್ಲಿ ಕಾಡುವ ವೈದ್ಯರ ಕೊರತೆ ನೀಗಬೇಕು, ಕ್ಯಾನ್ಸರ್ ಬಗ್ಗೆ ಜನರಲ್ಲಿ ಇನ್ನೂ ಜಾಗೃತಿ ಮೂಡಿಸುವ ಕೆಲಸ ಆಗಬೇಕು.

–ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

### ವಾಸ್ತವದ ರೂಪಕ

ಜಿ.ಎಸ್. ರಮೇಶ್ ಅವರ 'ಊರುಭಂಗ' ಪ್ರಬಂಧ ಎಲ್ಲ ಊರುಗಳ ಸ್ಥಿತಿಗಳ ಮೇಲೆ ಬೆಳಕು ಚೆಲ್ಲಿದಂತಿದ್ದು, ವಾಸ್ತವದ ರೂಪಕದಂತಿತ್ತು.

-ಎಚ್. ಆನಂದಕುಮಾರ್, ಚಿತ್ರದುರ್ಗ

### ಕನ್ನಡ ಕಥಾ ಸ್ಪರ್ಧೆ

ಬಿಎಸ್‌ಕೆಬಿ ಅಸೋಸಿಯೇಷನ್, ಮುಂಬಯಿ, ಗೋಕುಲವಾಣಿ ಮಾಸ ಪತ್ರಿಕೆಯ ವತಿಯಿಂದ ಶ್ರೀಕೃಷ್ಣ ಜನ್ಮಾಷ್ಟಮಿ ಅಖಿಲ ಭಾರತ ಕನ್ನಡ ಕಥಾ ಸ್ಪರ್ಧೆ ಏರ್ಪಡಿಸಿದೆ. ಕಥೆಗಳು ಜೂನ್ 15ರೊಳಗೆ 'ಸಂಪಾದಕರು, 'ಗೋಕುಲವಾಣಿ', ಬಿಎಸ್‌ಕೆಬಿ ಅಸೋಸಿಯೇಷನ್, ಗೋಕುಲ ಮಾರ್ಗ, ಸಯನ್ (ಪೂ), ಮುಂಬಯಿ 400022 ಇಲ್ಲಿಗೆ ತಲುಪಬೇಕು.

### ಚಿಂತನ ಮಂಥನದಲ್ಲಿ...

ಡಾ.ಕೆ.ಎನ್. ಗಣೇಶಯ್ಯನವರ 'ಮಲಿನಾಲಿಂಗನ' ಎರಡು ಕಂತಿನಲ್ಲಿ ಬಂದ ಕಥೆ, ಗತ ಇತಿಹಾಸದ ಗೋಪ್ಯಸಂಗತಿಗಳನ್ನು ಅನಾವರಣಗೊಳಿಸಿದೆ.

ಮನೆತನದ ಗೌರವವನ್ನು ಕಾಪಿಡುವುದಕ್ಕಾಗಿ ಮಗ ಸಲೀಮನನ್ನು ಹಾಗೂ ಅನಾರ್ಕಲಿಯನ್ನು ರಕ್ಷಿಸುವುದು, ಹೃದಯ ವೈಶಾಲ್ಯತೆಯನ್ನು ಬಿಂಬಿಸುವುದು.

-ಪೂರ್ಣಿಮಾ ಮೂರ್ತಿ, ಬೆಂಗಳೂರು.

'ಪವಿತ್ರಾಲಿಂಗನ' ಎಂದುಕೊಂಡಿದ್ದು 'ಮಲಿನಾಲಿಂಗನ' ಹೇಗಾಯಿತು? ಎಂಬುದನ್ನು ಕಲಾತ್ಮಕವಾಗಿ ನಿರೂಪಿಸಲಾಗಿದೆ.

–ಎಲ್.ಗಿರಿಜಾರಾಜ್